
ಯಾತ್ರೆಗಳನ್ನು ಸಂಪರ್ಕಿಸುವ ಸೇತುವೆಗಳು ಮತ್ತು ರಸ್ತೆಗಳು ನಾಶವಾಗಿ ಮೂರು ಲಕ್ಷಕ್ಕೂ ಹೆಚ್ಚು ಜನರು ಕಣಿವೆಗಳಲ್ಲಿ ಸಿಲುಕಿಕೊಂಡಿದ್ದರು. ಹೋಟೆಲ್‌ನಲ್ಲಿ ರೋಟಿ, ದಾಲ್ ಮತ್ತು ಮೊಸರನ್ನ ಬಾಯಿಗಿಳಿಸಿ, ಅದು ಹೊಟ್ಟೆ ಸೇರುವ ಮೊದಲೇ ನಮ್ಮಿಬ್ಬರನ್ನು ಕೂರಿಸಿಕೊಂಡ ನವೀನ್ ರಾಜ್ ಸಿಂಗ್, ಡ್ರಾಯಿಂಗ್ ಶೀಟ್‌ನಲ್ಲಿ ಚಾರ್‌ಧಾಮ್‌ನ ನಾಲ್ಕು ಧಾರ್ಮಿಕ ಸ್ಥಳಗಳನ್ನು ಮಾರ್ಕ್ ಮಾಡಿದರು. ಜನರು ಎಲ್ಲೆಲ್ಲಿ ಸಿಲುಕಿಕೊಂಡಿರಬಹುದು ಎನ್ನುವುದನ್ನು ಹಾಗೂ ಹತ್ತಿರದ ಜನವಸತಿ ನಗರಗಳನ್ನು ಗುರುತಿಸಿದ ನಂತರ, ಹೃಷಿಕೇಶ ಮತ್ತು ಹರಿದ್ವಾರದಲ್ಲಿ ನಮ್ಮ ಕ್ಯಾಂಪ್ ತೆರೆಯುವುದು ಸೂಕ್ತವೆಂದು ನಿಶ್ಚಯಿಸಿ ನನ್ನನ್ನು ಆಗಿಂದಾಗಲೇ ಹೃಷಿಕೇಶಕ್ಕೆ ತೆರಳಲು ಹೇಳಿದರು. ಸುಮಾರು ಎರಡು ತಾಸುಗಳ ಪ್ರಯಾಣ. ಕನ್ನಡಿಗರನ್ನು ಸುರಕ್ಷಿತವಾಗಿ ಕರೆತರುವ ಬಗ್ಗೆ ಯೋಚಿಸುತ್ತ, ಬಾಡಿಗೆ ಕಾರೊಂದರಲ್ಲಿ ಹೃಷಿಕೇಶ ತಲುಪಿದೆ.

ನಾನು ಹೋಗಿ ಸ್ಥಳೀಯ ಜಿಲ್ಲಾಧಿಕಾರಿ ಮತ್ತು ಎಸ್ಪಿ ಅವರನ್ನು ಭೇಟಿ ಮಾಡಿದೆ. ಡಿ.ಸಿ. ಕಚೇರಿಯಿಂದ ಹೊರಗಿನ್ನೂ ಕಾಲಿಟ್ಟಿರಲಿಲ್ಲ, ಅಷ್ಟರಲ್ಲಿ ಒಂದೇ ಸಮನೆ ಫೋನ್ ಕರೆಗಳು ಬರಲಾರಂಭಿಸಿದವು. ರಾಜ್ಯ ಸರ್ಕಾರದಿಂದ ನೇಮಕಗೊಂಡ ನಾವು ಮೂವರು ನೋಡಲ್ ಅಧಿಕಾರಿಗಳ ಮೊಬೈಲ್ ನಂಬರುಗಳನ್ನು ಟೀವಿ ಚಾನಲ್‌ಗಳು ಧಾರಾಳವಾಗಿ ತೋರಿಸಿದ್ದರಿಂದ ಆತಂಕಗೊಂಡ ಸಂಬಂಧಿಕರು, ಬಂಧುಬಳಗದವರು, ತಮ್ಮ ಜೀವ ಕೈಯಲಿಟ್ಟುಕೊಂಡು ತಮ್ಮವರಿಗಾಗಿ ಕರೆ ಮಾಡುತ್ತಿದ್ದರು. ಕೆಲವರ ಸಹನೆಯ ಕಟ್ಟೆಯೊಡೆದಿತ್ತು. ಸರ್ಕಾರ ಮತ್ತು ನೋಡೆಲ್ ಅಧಿಕಾರಿಗಳಿಗೆ ಅತಿ ಮಾನುಷ ಶಕ್ತಿಗಳು ಇರುವಂತೆ ಭಾವಿಸಿ ಕೂಡಲೇ ಸಂತ್ರಸ್ತರನ್ನು ಹುಡುಕಿ ಕರೆ ತರಬೇಕೆಂದು ಆಗ್ರಹಿಸುತ್ತಿದ್ದರು. ಕೆಲವರು ಸರ್ಕಾರ ಏನೂ ಮಾಡುತ್ತಿಲ್ಲವೆಂದು ನನ್ನನ್ನು ಬೈದರು, ನಿಂದಿಸಿದರು. ಬೈಗುಳಗಳ ಮಳೆ ಸುರಿಸಿದರು. ಸರ್ಕಾರಕ್ಕೆ ಹಿಡಿಶಾಪ ಹಾಕಿದರು. ತಾಳ್ಮೆಯಿಂದಲೇ ಎಲ್ಲಾ ಕರೆಗಳನ್ನು ಸ್ವೀಕರಿಸಿ ಸಮಾಧಾನಪಡಿಸಲು ಹರಸಾಹಸ ಪಟ್ಟೆ. ಬೈಗುಳಗಳನ್ನು ಕೇಳಿಸಿಕೊಂಡು ಸಮಾಧಾನವಾಗಿ ಇರುವುದು ಬಿಟ್ಟರೆ ಸರ್ಕಾರಿ ಅಧಿಕಾರಿಯಾದ ನನಗೆ ಬೇರೆ ಆಯ್ಕೆ ಇರಲಿಲ್ಲ.



ಹೃಷಿಕೇಶ ನಗರದ ಬಸ್ ನಿಲ್ದಾಣದಲ್ಲಿ ಸ್ವಯಂ ಸೇವಕರು ಸಹಾಯ ಕೇಂದ್ರಗಳನ್ನು ತೆರೆದಿದ್ದರು. ನೂರಾರು ಸಂಘ ಸಂಸ್ಥೆಗಳೂ ಯಾತ್ರಿಕರಿಗೆ ಉಚಿತ ಊಟ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದವು. ಬೆಂಗಳೂರಿನ ಸ್ನೇಹಿತರಿಗೆ ಕರೆ ಮಾಡಿ, 'ಕರ್ನಾಟಕ ಸರ್ಕಾರ ಸಹಾಯವಾಣಿ ಕೇಂದ್ರ – ಕ್ಯಾಂಪ್ ಹೃಷಿಕೇಶ' ಎಂದು ನನ್ನ ಮೊಬೈಲ್ ನಂಬರ್ ಸಹಿತ ಬ್ಯಾನರ್ ಡಿಸೈನ್ ಮಾಡಿಸಿ ಸಾಫ್ಟ್ ಕಾಪಿಯನ್ನು ಇಮೇಲ್ ಮೂಲಕ ತರಿಸಿಕೊಂಡೆ. ರಾಜ್ಯ ಲಾಂಛನ ಸಹಿತ ಕನ್ನಡದ ಬ್ಯಾನರ್ ಹೃಷಿಕೇಶದಲ್ಲಿ ರಾರಾಜಿಸಿತು.

ನನ್ನಲ್ಲಿನ ಕನ್ನಡದ ಮನ ನಲಿದಾಡಿತು. ಸಮಯ ಕಳೆದಂತೆ ಸಂತ್ರಸ್ತರ ಸಂಬಂಧಿಕರ, ಆಪ್ತರ ದೂರವಾಣಿ ಕರೆಗಳು ಹೆಚ್ಚಾಗುತ್ತಲೇ ಇದ್ದವು. ಕಣಿವೆಯಲ್ಲಿ ಸಿಲುಕಿಕೊಂಡ ಯಾತ್ರಿಕರ ಮೊಬೈಲ್ ಫೋನ್‌ಗಳ ಚಾರ್ಜ್ ಖಾಲಿಯಾಗಿ ಅವರ್‍ಯಾರೂ ಸಂಪರ್ಕಕ್ಕೆ ಸಿಗುತ್ತಿರಲಿಲ್ಲ. ಬೆಟ್ಟ, ಗುಡ್ಡಗಳ ಪ್ರದೇಶದಲ್ಲಿ ಸಿಲುಕಿರಬಹುದು, ಪ್ರವಾಹದಲ್ಲಿ ಕೊಚ್ಚಿ ಹೋಗಿರಬಹುದೆಂಬ ಅನುಮಾನದ ದುಗುಡ, ಬದುಕಿರಬಹುದಾದ ಸಾಧ್ಯತೆಗಳ ಬಗ್ಗೆ